ಮೈಸೂರು ಪ್ರಜಾಪ್ರತಿನಿಧಿ ಸಭೆಯ ವಿಷ್ಕಾಟು ಮತ್ತು ಆ ಸಭೆಯಲ್ಲಿ ಕೆಲಸ ನಡಸತಕ್ಕ ಕ್ರಮವನ್ನು ಕುರಿತು ತಯಾರಾದ ಮಸವಿದಾ ನಿಬಂಧನೆಗಳು.

1. ಬಂದು ತಾಲ್ಲೂಕಿಗಾಗಿ ಈ ಸಭೆಗೆ ಮೆಂಬರುಗಳು ಆಗುವದಕ್ಕೆ ಈ ಕೆಳಗೆ ವಿವರಿಸಿರುವ ಜನಗಳು ಅರ್ಹರಾಗಿರುತ್ತಾರೆ :—

(a) ತನ್ನ ಸ್ವಂತಕ್ಕಾಗಿ ಸರಕಾರಕ್ಕೆ ಸಾಲೀಯಾನಾ ಇದಕ್ಕೆ ಲಗ್ಗತ್ತ್ ಮಾಡಿರುವ A ಗುರುತಿನ ಷೆಡ್ಯೂಲ್ ಪಟ್ಟಿಯಲ್ಲಿ ನಮೂದಿಸಿರುವ ಮೊಬಲಗ್ಗೆ ಕಮ್ಮಿ ಇಲ್ಲದೆ ಜಮಿನು ಕಂದಾಯವನ್ನಾಗಲಿ ಅಥವಾ ಮೊಹತರಫಾ (ಮನೆ ಮತ್ತು ಅಂಗಡಿ) ತೆರಿಗೆಗಳನ್ನಾಗಲಿ ಆ ತಾಲ್ಲೂಕಿಗೆ ಕೊಡತಕ್ಕ ಪ್ರತಿ ಒಬ್ಬ ಮನುಷ್ಯ.

(b) ಅದೇ ತಾಲ್ಲೂಕಿನಲ್ಲಿ ವಾಸಮಾಡಿಕ್ಕೊಂಡಿದ್ದು 500 ರೂಪಾಯಿ ಒಟ್ಟು ಬೇರೀಜುವುಳ್ಳ ಬಂದು ಅಥವಾ ಹೆಚ್ಚಾದ ಪೂರಾಯಿನಾಂ ಗ್ರಾಮಗಳ ಸ್ವಂತಕರ್ತನಾಗಿರತಕ್ಕ ಪ್ರತಿ ಒಬ್ಬ ಮನುಷ್ಯ.

(c) ಯಾವದಾದರೂ ಇಂಡ್ಯ್ಯ ಯುನಿವರ್ಸಿಟಿಯಲ್ಲಿ ಡಿಗ್ರಿಗಳನ್ನು ಹೊಂದಿ ವಾಡಿಕೆಯಾಗಿ ಅದೇ ತಾಲ್ಲೂಕಿನಲ್ಲಿ ವಾಸಮಾಡಿಕ್ಕೊಂಡಿರತಕ್ಕ ಪ್ರತಿ ಒಬ್ಬ ಮನುಷ್ಯ.

2. ಮೇಲೆ ವಿವರಿಸಿರುವಂತೆ ಅರ್ಹತೆಯುಳ್ಳ ಜನಗಳು ಆಷಾಢವಾಸದ ಮೊದಲನೇ ವಾರದಲ್ಲಿ ಯಾವ ದಾದರು ಬಂದು ಗೊತ್ತಾದ ದಿವಸದಲ್ಲಿ ಅವರವರ ತಾಲ್ಲೂಕು ಕಸಬಾ ಸ್ಥಳದಲ್ಲಿ ಕಲಿಯತಕ್ಕದ್ದು. ಕಲಿಯುವದಕ್ಕೆ ಗೊತ್ತಾದ ದಿವಸವೆಂಬುವದು ಫಲಾನೇದೆಂದು ಬಂದು ತಿಂಗಳಿಗೆ ಕಮ್ಮಿ ಇಲ್ಲದಂತೆ ಮೊದಲೇ ನೋಟೀಸು ಕೊಡಲ್ಪಡುತ್ತೆ. ಅಂಥಾ ಮೀಟಿಂಗಿನಲ್ಲಿ ಸದರೀ ಜನಗಳು ಮುಂದೆ ಬರುವ ದಸರಾದಲ್ಲಿ ಮೈಸೂರಲ್ಲಿ ಆಗತಕ್ಕ ಪ್ರಜಾ ಪ್ರತಿನಿಧಿ ಸಭೆಗೆ ಬರತಕ್ಕ ಮೆಂಬರುಗಳನ್ನು ತಮ್ಮ ತಮ್ಮಲ್ಲಿಯೇ ನೇಮಿಸಿಕೊಳ್ಳಬೇಕು. ಆ ಮೇರಿಗೆ ನೇಮಿಸಲ್ಪಡುವ ಜನಗಳ ಸಂಖ್ಯೆ ಮೇಲೆ ವಿವರಿಸಿದ (A) ಷೆಡ್ಯೂಲಿನಲ್ಲಿ ನಮೂದಾಗುವ ಸಂಖ್ಯೆಗೆ ಹೆಚ್ಚಾಗಕೂಡದು.

3. ವಾಡಿಕೆಯಾಗಿ ಬೆಂಗಳೂರು ಅಥವಾ ಮೈಸೂರು ಷಹರುಗಳಲ್ಲಿ ವಾಸವಾಗಿರತಕ್ಕಂಥಾ ವರುಷ 1ಕ್ಕೆ 24 ರೂಪಾಯಿಗಳಿಗೆ ಕಮ್ಮಿ ಇಲ್ಲದ ಮನೆ ಅಥವಾ ಅಂಗಡಿ ಮೊಹತರ್ಫಾ ತೆರಿಗೆ ತೆರತಕ್ಕಂಥಾ ಅಥವಾ ಯಾವ ದಾದರು ಬಂದು ಇಂಡಿಯ್ಯ ಯೂನಿವರ್ಸಿಟಿಯಲ್ಲಿ ಡಿಗ್ರಿ ಪಡೆದು ಇರತಕ್ಕಂಥಾ ಜನಗಳು ಸಭೆಯ ಮೆಂಬರುಗಳಾಗುವದಕ್ಕೆ ಅರ್ಹತೆ ಉಳ್ಳವರಾಗಿರುತ್ತಾರೆ. ಹಿಂದಿನ ನಿಬಂಧನೆಯಲ್ಲಿ ಹೇಳಿರುವ ಮೇರಿಗೆ ಅವರುಗಳು ಬಂದು ಗೊತ್ತಾದ ದಿವಸದಲ್ಲಿ ತಮ್ಮತಮ್ಮ ಮ್ಯೂನಿಸಿಪಾಲಿಟಿ ವೈಸ್ ಪ್ರೆಸೀಡೆಂಟರ ಆಫೀಸಿನಲ್ಲಿ ಕಲೆತು ತಮ್ಮತಮ್ಮಲ್ಲಿಯೇ ಬೆಂಗಳೂರು ಮತ್ತು ಮೈಸೂರು ಷಹರುಗಳಿಗೆ ಬಂದೊಂದಕ್ಕೆ ನಾಲ್ಕು ನಾಲ್ಕು ಮೆಂಬರುಗಳಂತೆ ನೇಮಿಸಬೇಕು.

4. ಎರಡು ಮೂರನೇ ರೂಲ್ಸುಗಳ ಮೇರೆಗೆ ಚುನಾಯಿಸಲ್ಪಟ್ಟ ಮೆಂಬರುಗಳಲ್ಲದೆ.

(a) ಪ್ರತಿ ಬಂದು ಲೋಕಲ್‌ಫಂಡ್ ಬೋರ್ಡಿನವರು ಈ ಸಭೆಗೆ ತಮ್ಮಕಡೆ ಇಬ್ಬರು ಮೆಂಬರುಗಳನ್ನು ನೇಮಿಸಬಹುದು.

(b) ಇತರ ಪ್ರತಿ ಬಂದು ಮ್ಯೂನಿಸಿಪಲ್ ಬೋರ್ಡುಗಳವರು ತಮ್ಮ ಸಮಾಜದಿಂದ ಈ ಸಭೆಗೆ ಒಬ್ಬೊಬ್ಬ ಮೆಂಬರನ್ನು ಕಳುಹಿಸಬಹುದು. ಮೈಸೂರು ಬೆಂಗಳೂರು ಮತ್ತು ಇತರ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ನಲ್ಲಿರತಕ್ಕ ಮ್ಯೂನಿಸಿಪ್ಯಾಲಿಟಿಗಳಿಂದ ಇಬ್ಬಿಬ್ಬರು ಮೆಂಬರುಗಳು ನೇಮಿಸಲ್ಪಡಬಹುದು; ಮತ್ತು

(c) ಸಮ್ಮತವಾದ ಲೋಕೋಪಯುಕ್ತವಿಷಯ ವಿಚಾರ ಮಾಡತಕ್ಕ ಅಸೋಸಿಯೇಷನ್ಸ್ ಅಂದರೆ ಸಮಾಜಗಳು 100 ಮೆಂಬರುಗಳಿಗಿಂತಾ ಕಮ್ಮಿಇಲ್ಲದ ಸಮಾಜಗಳಾಗಿದ್ದರೆ ಮತ್ತು 100 ಜನಕ್ಕಿಂತಾ ಕಮ್ಮಿಯಾದ ಮೆಂಬರುಗಳುಳ್ಳದ್ದಾದಾಗ್ಯೂ ಸರಕಾರದವರಿಂದ ಪರಿಗಣಿಸಲ್ಪಟ್ಟ ಸಮಾಜಗಳಾಗಿದ್ದರೆ ಅವರುಗಳು ತಮ್ಮತಮ್ಮ ಸಮಾಜಗಳಿಂದ ಒಬ್ಬೊಬ್ಬ ಮೆಂಬರನ್ನ ಸಭೆಗೆ ಕಳುಹಿಸಬಹುದು.

5. ಹದಿನೆಂಟು ವರ್ಷ ವಯಸ್ಸು ತುಂಬದೇ ಇರತಕ್ಕ ಬುದ್ಧಿ ಸ್ಥಿತಿ ಸರಿಯಾಗಿಲ್ಲದೆ ಇರತಕ್ಕ ಅಥವಾ ಕೆಟ್ಟ ಕೃತ್ಯ ಅಥವಾ ಬದ್ದಚಾಲನ್ನ ವ್ಯಕ್ತಪಡಿಸತಕ್ಕ ಕ್ರಿಮಿನಲ್ ತಪ್ಪಿತಕ್ಕಾಗಿ ಸಜಾಮೊಂದಿದ ಯಾವ ಒಬ್ಬ ಮನುಷ್ಯನು ಈ ಸಭೆಗೆ ಮೆಂಬರಾಗಿ ದಾಖಲ್‌ಮಾಡಲ್ಪಡುವದಕ್ಕೆ ಅರ್ಹನಾಗಲಾರನು.

6. ಸರಕಾರದ ನೌಕರರಲ್ಲದ ಇತರ ಪ್ರಜೆಗಳ ಅಭಿಪ್ರಾಯವನ್ನ ತಿಳುದುಕೊಳ್ಳಬೇಕೆಂಬುವದೇ ಈ ಸಭೆಯ ಉದ್ದೇಶವಾದ್ದರಿಂದ ಸರಕಾರ ಸಂಬಳ ತೆಗದುಕೊಂಡು ನೌಕರಿಮಾಡುವ ಯಾವ ಒಬ್ಬನೆ ಆಗಲಿ ಈ ಸಭೆಗೆ ಮೆಂಬರುಗಳನ್ನ ಚುನಾಯಿಸುವದಕ್ಕೂ ಅಥವಾ ಮೆಂಬರಾಗಿ ಚುನಾಯಿಸಲ್ಪಡುವದಕ್ಕೂ ಅರ್ಹನಾಗಿರುವದಿಲ್ಲ.

7. ಎರಡು ಮೂರನೇ ರೂಲ್ಸುಗಳಲ್ಲಿ ನಮೂದಿಸಿದ ಮೀಟಿಂಗಾಗುವ ಕಾಲದಲ್ಲಿ ಅಥವಾ ಆ ಮೀಟಿಂಗ್ ಆದ ನಂತರ ಸಾಧ್ಯವಾದಷ್ಟು ಜಾಗ್ರತೆಯಾಗಿಯು ಅಥವಾ ಅವಶ್ಯಕ ಕಂಡುಬಂದಾಗೆಲ್ಲ ಪ್ರತಿ ತಾಲೋಕಿಗೂ ಅಥವಾ ಬೆಂಗಳೂರು, ಮೈಸೂರು ಷಹರಿಗಳಿಗೂ ಸದರೀ ನಿಬಂಧನೆಗಳಮೇರಿಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ಜನಗಳು ತಮ್ಮಲ್ಲಿ ತಾವು ಚರ್ಚಿಸಿಕೊಂಡನಂತರ ಮೈಸೂರಲ್ಲಿ ಮುಂದೆ ನಡಿಯತಕ್ಕ ದಸರಾ ಮೀಟಿಂಗ್‌ನಲ್ಲಿ ತಾವು ಚರ್ಚಿಸಬೇಕೆಂದು ಉದ್ದೇಶಿಸಿ ಇರುವ ಅಂಶಗಳನ್ನ ಮತ್ತು ತಮ್ಮ ಸಲಹೆಗಳನ್ನು ಪಾಂಗ್ತವಾಗಿ ನಮೂದಿಸಿ ಬಂದು ಮೆಮೋರ್ಯಾಂಡಮನ್ನು ತಯಾರು ಮಾಡಬೇಕು. ಅಂಥಾ ಮೆಮೋರ್ಯಾಂಡಮ್‌ಗಳನ್ನ ಅವರು ತಮ್ಮ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಿಗಳಿಗೆ ಶ್ರವಣವಾಸದ ಆಖೈರಿನಳಗಾಗಿ ತಲಪುವಂತೆ ಶೀದಾ ರವಾನೇಮಾಡಬೇಕು.

8. 4ನೇ ರೂಲ್ಸ್‌ನಲ್ಲಿ ನಮೂದಿಸಿಯಿರುವ ಬೋರ್ಡಿನವರು ಮತ್ತು ಸಮಾಜದವರು ಬದಸ್ತೂರು ಮೈಸೂರಲ್ಲಿ ಮುಂದೆ ನಡಿಯತಕ್ಕ ಸಭೆಯಲ್ಲಿ ಯಾವಯಾವ ಅಂಶಗಳನ್ನು ಚರ್ಚಿಸಬೇಕೆಂದು ನಿರೀಕ್ಷಿಸು ತ್ತಾರೋ ಅಂಥಾ ಸಂಗತಿಗಳನ್ನ ನಮೂದಿಸಿ ಮೆಮೋರ್ಯಾಂಡಮ್ ತಯಾರುಮಾಡಿ ಅದರ ಜೊತೇಲಿ 4ನೇ ರೂಲ್ಸ್ ಮೇರಿಗೆ ನೇಮಿಸಲ್ಪಟ್ಟ ಮೆಂಬರುಗಳ ಬಂದು ಅಲಾಹಿದಾ ಪಟ್ಟಿನಿಸಿ ಶ್ರಾವಣಮಾಸ ಆಖೈರು ಆಗುವದಕ್ಕೆ ಮೊದ ಲೇ ತಲಪ್ಪವಂತೆ ಡಿಪ್ಯುಟಿ ಕಮಿಷರ್ಸರವರಿಗೆ ಕಳುಹಿಸಬೇಕು.

9. 7-8ನೇ ನಿಬಂಧನೆಗಳ ಮೇರಿಗೆ ರವಾನಿಸಲ್ಪಟ್ಟ ಮೆಮೋರ್ಯಾಂಡಂಗಳು ಡಿಪ್ಯುಟಿ ಕಮಿಷರ್ಸರವರ ಆಫೀ ಸಿನಲ್ಲಿ ಸರಿಯಾಗಿ ಜಮಾಯಿಸಲ್ಪಟ್ಟು ಅವುಗಳಲ್ಲಿ ನಮೂದು ಆಗುವ ಪ್ರತಿ ಬಂದು ಸಂಗತಿಯಲ್ಲಿ ಡಿಪ್ಯುಟಿಕಮಿಷ ನ್ನರ ಷರಾಗಳನ್ನು ನಮೂದುಮಾಡಿ ಇದರ ಜೊತೇಲಿ ಇರುವ B ಷೆಡ್ಯೂಲಿನ ನಮೂನೆ ಮೇರಿಗೆ ತಯಾರುಮಾ ಡಿಸಿ ಭಾದ್ರಪದಮಾಸದ ಮಧ್ಯಭಾಗದವಳಗಾಗಿ ಬಂದು ತಲಪ್ಪುವಂತೆ ಚೀಫ್ ಸೆಕ್ರೆಟರಿಯವರಿಗೆ ರವಾನಿಸಬೇಕು.

10. ಪ್ರತಿ ಡಿಸ್ಟ್ರಿಕ್ಟಿನಿಂದ ಬರತಕ್ಕ ಮೆಂಬರುಗಳು ಆಶ್ವೀಜ ಶುದ್ಧ ೧೦ಗೆ ಮುಂಚಿತವಾಗಿ ಮೈಸೂ ರಲ್ಲಿ ಕ್ರಮವಾದ ಮಿಟಿಂಗ್‌ಮಾಡಿ ಅಂಥಾ ಮಿಟಿಂಗ್‌ನಲ್ಲಿ 7—8ನೇ ರೂಲ್ಸುಗಳ ಮೇರಿಗೆ ಕಳುಹಿಸಿಕೊಟ್ಟ ಮೆಮೋ ರ್ಯಾಂಡಮ್‌ಗಳಲ್ಲಿ ನಮೂದಿಲ್ಲದ ಯಾವದಾದರೂ ವಿಷಯಗಳನ್ನು ಸಭೆಯಲ್ಲಿ ಪ್ರಸ್ತಾಪ ಮಾಡಬೇಕೆಂದು ತೀರ್ಮಾ ನಿಸುವ ಪಕ್ಷಕ್ಕೆ ಅಂಥಾ ಹೆಚ್ಚುವಿಷಯಗಳ ಬಂದು ಸಪ್ಲಿಮೆಂಟಲ್ ಪಟ್ಟಿಯನ್ನು ಚೀಫ್ ಸೆಕ್ರೆಟರಿಯವರ ಬಳಿಗೆ ಆಶ್ವೀಜ ಶುದ್ಧ ೧೧ ಸಾಯಂಕಾಲಕ್ಕೆ ಮುಂಚೆ ಕಳುಹಿಸಬೇಕು.

11. ಪ್ರಜಾ ಪ್ರತಿನಿಧಿ ಸಭೆಯವರು ತಮ್ಮ ಮಿಟಿಂಗುಗಳನ್ನು ಮೈಸೂರಲ್ಲಿ ಆಶ್ವೀಜ ಶುದ್ಧ ೧೩ ದಿನದ ಲ್ಲಿಯೂ ಮತ್ತು ಅದರ ಆಚೆ ದಿನಗಳಲ್ಲಿಯೂ ಮಾಡತಕ್ಕದ್ದು.

12. ಮೇಲಿನ ರೂಲ್ಸ್‌ಗಳ ಮೇರಿಗೆ ಈ ಸಭೆಯ ಮೆಂಬರುಗಳ ಸಂಖ್ಯೆ ಈ ಕೆಳಗೆ ವಿವರಿಸಿರುವ ಸಂಖ್ಯೆಗಿಂತಾ ಹೆಚ್ಚಾಗಕೂಡದು.

1.	ಮೈಸೂರು, ಬೆಂಗಳೂರು ಪಟ್ಟಣಗಳಿಗಾಗಿ ಚುನಾಯಿಸಲ್ಪಟ್ಟ ಮೆಂಬರುಗಳು	..	8
2.	A ಷೆಡ್ಯೂಲ್ ಪ್ರಕಾರ 66 ತಾಲ್ಲೂಕುಗಳಿಗೆ ಚುನಾಯಿಸಲ್ಪಟ್ಟ ಮೆಂಬರುಗಳು	..	212
3.	ಡಿಸ್ಟ್ರಿಕ್ಟು ಹೆಡ್‌ಕ್ವಾರ್ಟರ್ 8 ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು	..	16
4.	ಇತರ 89 ಮ್ಯುನಿಸಿಪಾಲಿಟಿಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ...	..	89
5.	9 ಲೋಕಲ್ ಫಂಡ್ ಬೋರ್ಡುಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ..	..	18
6.	ಲೋಕೋಪಯುಕ್ತ ವಿಚಾರಗಳಿಗಾಗಿ ಇರುವ ಸಮಾಜಗಳಿಂದ ನೇಮಿಸಲ್ಪಟ್ಟ ಮೆಂಬರುಗಳು ಸುಮಾರು		8
	ಜುಂಮ್ಲಾ ..		351

13. ಮೇಲಿನ ನಿಬಂಧನೆಗಳು ಮುಂದಿನ ಸಂವತ್ಸರದಲ್ಲಿ ಆಗುವ ದಸರಾ ಸಭಾವಿಷಯದಲ್ಲಿ ಜಾರೀಗೆ ಬರ ತಕ್ಕದ್ದು.

ಷೆಡ್ಯೂಲ್ A.

ಹಾಲೀ ಏರ್ಪಡಿಸುವ ರೂಲ್ಸ್ ಪೈಕಿ 1ನೇ ರೂಲ್ಸಿನ ಕಲಂ (a) ಮೇರಿಗೆ ಮೈಸೂರು ಪ್ರಜಾಪ್ರತಿನಿಧಿಗಳ ಸಭೆಗೆ ಎಷ್ಟುಮಟ್ಟಿನ ಆಸ್ತಿವಂತರು ಮೆಂಬರು ಆಗಬಹುದೆಂಬುವದನ್ನೂ ಮತ್ತು 2ನೇ ರೂಲ್ಸ್ ಮೇರಿಗೆ ಪ್ರತಿ ತಾಲ್ಲೂಕಿಗೂ ಎಷ್ಟುಮಂದಿ ಬಳಗಾಗಿ ಮೆಂಬ ರುಗಳು ನೇಮಕವಾಗಬಹುದೆಂಬುವದನ್ನೂ ತೋರಿಸುವ ತಖ್ತಾ.

ಡಿಸ್ಟ್ರಿಕ್ಟ್	ತಾಲ್ಲೂಕಿನ ಹೆಸರು.	ಆಸ್ತಿವಿವರ; 1ನೇ ರೂಲ್ಸ್ ಕಲಂ (a) ಮೇರಿಗೆ.		2ನೇ ರೂಲ್ಸ್ ಮೇರಿಗೆ ಪ್ರತಿ ತಾಲ್ಲೂಕಿಗೂ ಎಷ್ಟುಮಂದಿ ಬಳಗಾಗಿ ಮೆಂಬರುಗಳು ನೇಮಕವಾಗತಕ್ಕದ್ದು.
		ಜಮ್ಮಾ ಕಂದಾಯ ಕೊಡುವಲ್ಲಿ ಸದರಿ ಕಂದಾಯ ಸಾಲೀಯಾನ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು.	ಮೊಹತರ್ಫಾ (ಮನೆ ಮತ್ತು ಅಂಗಡಿ ತೆರಿಗೆ) ಕೊಡುವಲ್ಲಿ ಸದರಿ ತೆರಿಗೆ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು.	
		ರೂ.	ರೂ.	
ಬೆಂಗಳೂರು.	1. ಬೆಂಗಳೂರು ತಾ॥ (ಬೆಂಗಳೂರು ಪಟ್ಟಣ ವಿನಹ)	200	13	3
	2. ಹೊಸಕೋಟೆ	200	13	3
	3. ದೇವನಹಳ್ಳಿ	150	13	3
	4. ದೊಡ್ಡಬಳ್ಳಾಪುರ	150	13	3
	5. ನೆಲಮಂಗಲ	200	13	3
	6. ಕಾರ್ಕಾನಹಳ್ಳಿ .. .	100	13	3
	7. ಮಾಗಡಿ	200	13	3
	8. ಕೋಲ್ಸ್‌ಪೇಟೆ, ಚನ್ನಪಟ್ಟಣ ಸಬ್‌ತಾಲ್ಲೂಕು ಸೇರಿ	150	17	3
	9. ಆನೇಕಲ್	200	13	3
	ಜುಂಮ್ಲಾ			27

ಜಿಲ್ಲೆ.	ತಾಲ್ಲೂಕಿನ ಹೆಸರು.	ಲಸ್ತಿವಿವರ; 1ನೇ ರೂಲ್ಸ್‌ಕಲಂ (a) ಮೇರಿಗೆ.		2ನೇ ರೂಲ್ಸ್ ಮೇರಿಗೆ ಪ್ರತಿ ತಾಲ್ಲೂಕಿಗೂ ಎಷ್ಟುಮಂದಿ ಬಳಗಾಗಿ ಮೆಂಬರುಗಳು ನೇಮಕವಾಗತಕ್ಕದ್ದು.
		ಜಮ್ಮಿ ಕಂದಾಯ ಕೊಡುವಲ್ಲಿ ಸದರಿ ಕಂದಾಯ ಸಾಲೀಯಾನ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು.	ಮೊಹತರ್ಫಾ (ಮನೆ ಮತ್ತು ಅಂಗಡಿ ತೆರಿಗೆ) ಕೊಡುವಲ್ಲಿ ಸದರಿ ತೆರಿಗೆ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು.	
		ರೂ.	ರೂ.	
ಕೋಲಾರ.	1. ಕೋಲಾರ	150	17	4
	2. ಬೌರಿಂಗ್‌ಪೇಟೆ	100	13	3
	3. ಚಿಂತಾಮಣಿ, ಶ್ರೀನಿವಾಸಪುರ ಸಬ್ ತಾಲ್ಲೂಕು ಸೇರಿ	150	17	4
	4. ಮುಳಬಾಗಿಲ್	100	13	3
	5. ಶಿಡ್ಲಘಟ್ಟ	100	13	3
	6. ಚಿಕ್ಕಬಳ್ಳಾಪುರ	100	17	3
	7. ಬಾಗೇಪಲ್ಲಿ ಗುಡಿಬಂಡೆ ಸಬ್ ತಾ॥ ಸೇರಿ ..	200	13	3
	8. ಗೋರಿಬಿದನೂರು	150	13	3
	9. ಮಾಲೂರು	100	13	2
	ಜುಂಮ್ಲಾ.....			28
ತುಮಕೂರು.	1. ತುಮಕೂರು	100	17	4
	2. ಮದ್ದಗಿರಿ, ಕೊರಟಗೆರೆ ಸಬ್ ತಾ॥ ಸೇರಿ ..	150	13	4
	3. ಚಿಕ್ಕನಾಯಕನಹಳ್ಳಿ, ಹುಳಿಯಾರ ಸಬ್ ತಾ॥ಸೇರಿ	150	13	3
	4. ಟಿರ	200	13	3
	5. ಗುಬ್ಬಿ	200	17	4
	6. ತಿಪಟೂರು, ತುರುವೆಕೆರೆ ಸಬ್ ತಾ॥ ಸೇರಿ ..	100	17	3
	7. ಪಾವಗಡ	100	13	2
	8. ಕುಣಿಗಲ್	100	13	3
	ಜುಂಮ್ಲಾ....			26
ಶಿವಮೊಗ್ಗ.	1. ಶಿವಮೊಗ್ಗ, ಕುಂಸಿ ಸಬ್ ತಾ॥ ಸೇರಿ ..	200	17	4
	2. ಚನ್ನಗಿರಿ	150	13	4
	3. ಹೊನ್ನಾಳಿ	200	13	4
	4. ಶಿಕಾರಿಪುರ	200	13	4
	5. ಸೊರಬ	300	13	4
	6. ಸಾಗರ	300	13	4
	7. ನಗರ	300	13	4
	8. ತೀರ್ಥಹಳ್ಳಿ	300	13	4
	ಜುಂಮ್ಲಾ....			32
ಕಡೂರು.	1. ಚಿಕ್ಕಮಗಳೂರು	200	17	4
	2. ಕಡೂರು	200	13	3
	3. ತರೀಕೆರೆ	300	13	4
	4. ಕೊಪ್ಪ, ಎಡೆಹಳ್ಳಿ ಸಬ್ ತಾ॥ ಸೇರಿ ..	300	13	4
	5. ಮೂಡುಗೆರೆ	200	13	4
	ಜುಂಮ್ಲಾ.....			19

ಜಿಲ್ಲೆ.	ತಾಲ್ಲೂಕಿನ ಹೆಸರು.	ಆಸ್ತಿವಿವರ; 1ನೇ ರೂಲ್ಸ್‌ಕಲಂ (a) ಮೇರಿಗೆ.		2ನೇ ರೂಲ್ಸ್‌ಮೇರಿಗೆ ಪ್ರತಿ ತಾಲ್ಲೂಕಿಗೂ ಎಷ್ಟುಮಂದಿ ಒಳಗಾಗಿ ಮೆಂಬರುಗಳು ನೇಮಕವಾಗತಕ್ಕದ್ದು.
		ಜಮೀನ್ ಕಂದಾಯ ಕೊಡುವಲ್ಲಿ ಸದರಿ ಕಂದಾಯ ಸಾಲೀಯಾನ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು.	ಮೊಹತರ್ಫಾ (ಮನೆ ಮತ್ತು ಅಂಗಡಿ ತೆರಿಗೆ) ಕೊಡುವಲ್ಲಿ ಸದರಿ ತೆರಿಗೆ ಎಷ್ಟಕ್ಕಿಂತಲೂ ಕಮ್ಮಿ ಇರಕೂಡದು	
		ರೂ.	ರೂ.	
ಚಿತ್ರದುರ್ಗ.	1. ಚಿತ್ರದುರ್ಗ	200	13	3
	2. ಚಳ್ಳಕೆರೆ	100	13	3
	3. ಮೊಳಕಾಲ್‌ಮೂರು	100	13	2
	4. ಹಿರಿಯೂರು	100	13	2
	5. ಹೊಳಲುಕೆರೆ, ಹೊಸದುರ್ಗ ಸಬ್ ತಾಲ್ಲೂಕು ಸೇರಿ	100	13	3
	6. ದಾವಣಗೆರೆ	200	17	4
	7. ಜಗಳೂರು	100	13	2
	ಜುಂಮ್ಲಾ.....			19
ಹಾಸನ.	1. ಹಾಸನ, ಗ್ರಾಮ ಸಬ್ ತಾ॥ ಸೇರಿ ..	200	17	4
	2. ಮಂಜರಾಬಾದ್	200	13	4
	3. ಬೇಲೂರು	200	13	3
	4. ಅರಸಿಕೆರೆ	150	13	3
	5. ಚೆನ್ನರಾಯಪಟ್ಟಣ	150	13	3
	6. ಹೊಳೆನರಸಿಪುರ	100	13	2
	7. ಅರಕಲಗೂಡು	150	13	3
	ಜುಮ್ಲಾ.....			22
ಮೈಸೂರು.	1. ಮೈಸೂರು ತಾ॥ (ಮೈಸೂರು ಷಹರ್ ವಿನಹ)	200	13	4
	2. ಯಡತೊರೆ	200	13	4
	3. ಹುಣಸೂರು	200	13	3
	4. ಹೆಗ್ಗಡದೇವನಕೋಟೆ	100	13	2
	5. ಗುಂಡ್ಲುಪೇಟೆ	100	13	2
	6. ಚಾಮರಾಜನಗರ	150	13	3
	7. ನಂಜನಗೂಡು	100	13	3
	8. ತಿರುಮಕೂಡ್ಲುನರಸಿಪುರ	200	13	3
	9. ಶ್ರೀರಂಗಪಟ್ಟಣ	200	17	4
	10. ಅತ್ತಿಕೊಪ್ಪ	200	13	3
	11. ನಾಗಮಂಗಲ	150	13	3
	12. ಮಂಡ್ಯ	100	13	3
	13. ಮಳವಳ್ಳಿ	100	13	2
	ಜುಮ್ಲಾ.....			39
	ಒಟ್ಟು ಜುಮ್ಲಾ.....			212

ಷೆಡ್ಯೂಲ್ B.

189 ನೇ ಇನವಿ ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಡಿಸ್ಟ್ರಿಕ್ಟು ಮೆಂಬರುಗಳು ಕೃತಪಡಿಸುವ ಅಂಕಗಳನ್ನು ನಮೂದಿಸುವ ತಖ್ತಾ.

ಜರ್ನಲ್ ನಂಬರ್.	ಮಾತನಾಡುವವರ ಹೆಸರು.	ಮೆಂಬರುಗಳು ಕೃತಪಡಿಸುವ ಅಂಕ ಅಥವಾ ಸಲಹೆ.	ಸದರೀ ಅಂಕಗಳ ವಿಷಯವಾಗಿ ಜಾರೀಲಿರುವ ಹುಕ್ಕುಂ ಅಥವಾ ಪದ್ಧತಿ.	ಡಿಪ್ಯೂಟಿ ಕಮ್ಮಿಷನರವರ ಷರಾ.	ದಿರ್ವಾ ನಾಹೇಬರವರ ಉತ್ತರ.

ಮೈಸೂರಲ್ಲಿರುವ ಸರಕಾರದ ಬ್ಯಾಂಬೆ ಮುದ್ರಾಕ್ಷರಶಾಲೆ.—1890.